# ಕೇರಳ ಸರಕಾರ

ಕಾನೂನು (ಶಾಸನ ರಚನೆ-ಬಿ) ಇಲಾಖೆ

## ಅಧಿಸೂಚನೆ

ನಂಬ್ರ. 22971/ಲೆಗ್. ಬಿ1/2017/ಕಾನೂನು. *ತಿರುವನಂತಪುರಂ,* *2018 ಫೆಬ್ರವರಿ 12, 1193 ಮಕರ 29/ 1939 ಮಾಘ 23.*

2018 ಫೆಬ್ರವರಿ 12ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದಂತಹ ಈ ಕೆಳಗಿನ ಅಧ್ಯಾದೇಶವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಕಾರ್ಯದರ್ಶಿ.*

## 2018ರ 10ನೇ ನಂಬ್ರ ಅಧ್ಯಾದೇಶ

## 2018ರ ತಿರುವಾಂಕೂರು-ಕೊಚ್ಚಿ ಹಿಂದೂ ಧಾರ್ಮಿಕ ಸಂಸ್ಥೆಗಳ (ತಿದ್ದುಪಡಿ) ಅಧ್ಯಾದೇಶ

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟಿತು.

1950ರ ತಿರುವಾಂಕೂರ್-ಕೊಚ್ಚಿ ಹಿಂದೂ ಧಾರ್ಮಿಕ ಸಂಸ್ಥೆಗಳ ಅಧಿನಿಯಮವನ್ನು ಮತ್ತಷ್ಟೂ ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧ್ಯಾದೇಶ

ಪೀಠಿಕೆ.—2017ರ ತಿರುವಾಂಕೂರು-ಕೊಚ್ಚಿ ಹಿಂದೂ ಧಾರ್ಮಿಕ ಸಂಸ್ಥೆಗಳ (ತಿದ್ದುಪಡಿ) ಅಧ್ಯಾದೇಶ (2017ರ 23)ವು 2017 ನವೆಂಬರ್ 14ನೇ ದಿನಾಂಕದಂದು ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟರೂ;

ಹಾಗೂ 2018 ಜನವರಿ 22ನೇ ದಿನಾಂಕದಂದು ಪ್ರಾರಂಭಗೊಂಡು 2018 ಫೆಬ್ರವರಿ 7ನೇ ದಿನಾಂಕದಂದು ಅಂತ್ಯಗೊಂಡ ಕೇರಳ ರಾಜ್ಯ ವಿಧಾನಸಭೆಯ ಅಧಿವೇಶನ ಕಾಲದಲ್ಲಿ ಪ್ರಸ್ತುತ ಅಧ್ಯಾದೇಶದ ಬದಲಾಗಿ ರಾಜ್ಯ ವಿಧಾನಸಭೆಯ ಒಂದು ಅಧಿನಿಯಮವನ್ನು ಜಾರಿಗೆ ತರುವುದಕ್ಕಾಗಿ ಒಂದು ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಮಂಜೂರು ಮಾಡಲು ಸಾಧ್ಯವಾಗದಿರುವುದರಿಂದಲೂ;

ಹಾಗೂ, ಭಾರತ ಸಂವಿಧಾನದ 213ನೇ ಅನುಚ್ಛೇದದ (2)ನೇ ಖಂಡದ (ಎ) ಉಪಖಂಡದ ಪ್ರಕಾರ, ಸದ್ರಿ ಅಧ್ಯಾದೇಶಕ್ಕೆ 2018 ಮಾರ್ಚ್ 5ನೇ ದಿನಾಂಕದಿಂದ ಪ್ರಾಬಲ್ಯ ಇಲ್ಲದಾಗುವುದರಿಂದಲೂ;

ಹಾಗೂ ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಊರ್ಜಿತದಲ್ಲಿರಿಸದಿದ್ದಲ್ಲಿ ಸಮಸ್ಯೆಗಳು ಉದ್ಭವಿಸುವುದರಿಂದಲೂ;

ಹಾಗೂ, ಕೇರಳ ರಾಜ್ಯ ವಿಧಾನಸಭೆಯು ಅಧಿವೇಶನದಲ್ಲಿಲ್ಲದಿರುವುದರಿಂದಲೂ ಹಾಗೂ ತಾನು ತುರ್ತುಕ್ರಮವನ್ನು ಕೈಗೊಳ್ಳಲು ಅಗತ್ಯವಾದ ಸನ್ನಿವೇಶಗಳು ಅಸ್ತಿತ್ವದಲ್ಲಿದೆಯೆಂದು ಕೇರಳ ರಾಜ್ಯಪಾಲರಿಗೆ ಮನವರಿಕೆಯಾಗಿರುವುದರಿಂದಲೂ;

ಈಗ, ಆದುದರಿಂದ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಪ್ರಕಾರ ನೀಡಲ್ಪಟ್ಟ ಅಧಿಕಾರಗಳನ್ನು ವಿನಿಯೋಗಿಸಿ, ಕೇರಳ ರಾಜ್ಯಪಾಲರು ಈ ಕೆಳಗಿನ ಅಧ್ಯಾದೇಶವನ್ನು ಪ್ರಖ್ಯಾಪಿಸಲು ಇಚ್ಛಿಸುತ್ತಾರೆ:—

1. ಸಂಕ್ಷಿಪ್ತನಾಮ ಮತ್ತು ಪ್ರಾರಂಭ.—(1) ಈ ಅಧ್ಯಾದೇಶವನ್ನು 2018ರ ತಿರುವಾಂಕೂರ್-ಕೊಚ್ಚಿ ಹಿಂದೂ ಧಾರ್ಮಿಕ ಸಂಸ್ಥೆಗಳ (ತಿದ್ದುಪಡಿ) ಅಧ್ಯಾದೇಶವೆಂದು ಕರೆಯಬಹುದು.

(2) ಇದು 2017 ನವೆಂಬರ್ 14ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 1950ರ XVನೇ ಅಧಿನಿಯಮವನ್ನು ತಾತ್ಕಾಲಿಕವಾಗಿ ತಿದ್ದುಪಡಿಮಾಡುವುದು.— ಈ ಅಧ್ಯಾದೇಶವು ಜಾರಿಯಲ್ಲಿರುವ ಅವಧಿಯಲ್ಲಿ, 1950ರ ತಿರುವಾಂಕೂರು-ಕೊಚ್ಚಿ ಹಿಂದೂ ಧಾರ್ಮಿಕ ಸಂಸ್ಥೆಗಳ ಅಧಿನಿಯಮ (1950ರ XVನೇ ಅಧಿನಿಯಮ) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ಕ್ಕೆ 3 ರಿಂದ 5ನೇ ವರೆಗಿನ ವಿಭಾಗಗಳ ನಿರ್ದಿಷ್ಟಪಡಿಸಿದ ತಿದ್ದುಪಡಿಗೊಳಪಟ್ಟು ಜಾರಿಯಲ್ಲಿರುತ್ತದೆ.

3. 10ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 10ನೇ ವಿಭಾಗದ, (1)ನೇ ಉಪ-ವಿಭಾಗದಲ್ಲಿ, "ಮೂರು ವರ್ಷಗಳು" ಎಂಬ ಪದಗಳ ಜಾಗದಲ್ಲಿ "ಎರಡು ವರ್ಷಗಳು" ಎಂಬ ಪದಗಳನ್ನು ಬದಲಿಯಾಗಿ ಸೇರಿಸತಕ್ಕದ್ದು.

4. 12ನೇ ವಿಭಾಗದ ಜಾಗದಲ್ಲಿ ಹೊಸ ವಿಭಾಗವನ್ನು ಬದಲಿಯಾಗಿ ಸೇರಿಸುವುದು.— ಪ್ರಧಾನ ಅಧಿನಿಯಮದ 12ನೇ ವಿಭಾಗದ ಜಾಗದಲ್ಲಿ, ಈ ಕೆಳಗಿನ ವಿಭಾಗವನ್ನು ಬದಲಿಯಾಗಿ ಸೇರಿಸತಕ್ಕದ್ದು, ಅದೇನೆಂದರೇ:—

"12 ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಗೌರವಧನ.—ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಸರಕಾರವು ಕಾಲಕಾಲಕ್ಕೆ ಅಧಿಕೃತ ಗಜೆಟ್‌ನಲ್ಲಿ ಪ್ರಕಟಿಸಿದ ಅಧಿಸೂಚನೆಯ ಪ್ರಕಾರ ನಿಗದಿಪಡಿಸಬಹುದಾದಂತಹ ಗೌರವಧನ ಹಾಗೂ ಆಸೀನ ಶುಲ್ಕಗಳನ್ನು ಪ್ರತೀ ತಿಂಗಳು ಪಡೆಯಲು ಅರ್ಹರಾಗಿರುತ್ತಾರೆ.".

5. 71ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 71ನೇ ವಿಭಾಗದ, (2)ನೇ ಉಪ-ವಿಭಾಗದ ಜಾಗದಲ್ಲಿ, ಈ ಕೆಳಗಿನ ಉಪ-ವಿಭಾಗವನ್ನು ಬದಲಿಯಾಗಿ ಸೇರಿಸತಕ್ಕದ್ದು, ಅದೇನೆಂದರೆ:—

"(2) ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಸರಕಾರವು ಕಾಲಕಾಲಕ್ಕೆ ಅಧಿಕೃತ ಗಜೆಟಿನಲ್ಲಿ ಪ್ರಕಟಿಸಿದ ಅಧಿಸೂಚನೆಯ ಪ್ರಕಾರ ನಿಗದಿಪಡಿಸಬಹುದಾದಂತಹ ಗೌರವಧನ ಹಾಗೂ ಆಸೀನ ಶುಲ್ಕಗಳನ್ನು ಪ್ರತೀ ತಿಂಗಳು ಪಡೆಯಲು ಅರ್ಹರಾಗಿರುತ್ತಾರೆ.".

6. ರದ್ದತಿ ಮತ್ತು ರಕ್ಷಣೆ.—(1) 2017ರ ತಿರುವಾಂಕೂರು-ಕೊಚ್ಚಿ ಹಿಂದೂ ಧಾರ್ಮಿಕ ಸಂಸ್ಥೆಗಳ (ತಿದ್ದುಪಡಿ) ಅಧ್ಯಾದೇಶ (2017ರ 23)ವನ್ನು ಈ ಮೂಲಕ ರದ್ದುಗೊಳಿಸಲಾಗಿದೆ.

(2) ಆ ರೀತಿ ರದ್ದುಗೊಳಿಸಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಯಾವುದಾದರೂ ಕಾರ್ಯ ಅಥವಾ ಕೈಗೊಂಡ ಯಾವುದಾದರೂ ಕ್ರಮವು ಈ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

**ಪಿ. ಸದಾಶಿವಂ,**

ರಾಜ್ಯಪಾಲರು.